# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 947 (1080) |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 16.12.2025 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಪ್ರಕರಣ 4-ಕೆ ತಿದ್ದುಪಡಿ ಪ್ರಕಾರ ಯೋಜನಾ ವ್ಯಾಪ್ತಿಯ ಒಳಗಿರುವ ಹಾಗೂ ಹೊರಗಿರುವ ಗ್ರಾಮಗಳನ್ನು ಮ್ಯಾಪಿಂಗ್ ಮಾಡಲಾಗಿದೆಯೇ: | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಎ ರನ್ವಯ ರಾಜ್ಯ ಸರ್ಕಾರವು, ಒಂದು ಅಧಿಸೂಚನೆಯ ಮೂಲಕ ರಾಜ್ಯದ ಯಾವುದೇ ಪ್ರದೇಶವನ್ನು ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲು ಅವಕಾಶವಿರುತ್ತದೆ. ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿದ ಅಧಿಸೂಚನೆಯಲ್ಲಿ ಅದರ ವ್ಯಾಪ್ತಿಯನ್ನು ನಿಗದಿಪಡಿಸಲಾಗುತ್ತದೆ.<br><br>ನಂತರ ಕಲಂ 4-ಸಿ ರನ್ವಯ ರಾಜ್ಯ ಸರ್ಕಾರವು ಸದರಿ ಪ್ರದೇಶದಲ್ಲಿ "ಯೋಜನಾ ಪ್ರಾಧಿಕಾರ" ಎಂದು ಕರೆಯಲಾಗುವ ಸದರಿ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.<br><br>ಸ್ಥಳೀಯ ಯೋಜನಾ ಪ್ರದೇಶದ ಹೊರಗಿನ ಪ್ರದೇಶಗಳ ವ್ಯಾಪ್ತಿಯು ಬೃಹದಾಕಾರವಾಗಿರುವುದರಿಂದ ಹಾಗೂ ತೀವ್ರಗತಿಯಲ್ಲಿ ಬೆಳವಣಿಗೆಗಳು ಇಲ್ಲದೆ ಇರುವುದರಿಂದ ಸದರಿ ಪ್ರದೇಶಗಳನ್ನು ಏಕ ರೂಪವಾಗಿ ಅಭಿವೃದ್ಧಿಪಡಿಸುವ ಸಲುವಾಗಿ ಹಾಗೂ ಗ್ರಾಮೀಣ ಪ್ರದೇಶಗಳ ಸುಸ್ಥಿರ ಮತ್ತು ಸಮಗ್ರ ಅಭಿವೃದ್ಧಿಗಾಗಿ ಹಾಗೂ ಯೋಜನಾ ಬದ್ಧವಾಗಿ ರೂಪಿಸುವ ಸಂಬಂಧ ಕರ್ನಾಟಕ ಸರ್ಕಾರವು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ (ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳನ್ನು ಯೋಜನಾಬದ್ಧವಾಗಿ ರೂಪಿಸುವ ಸಂಬಂಧ) ಅಧಿಸೂಚನೆಯನ್ನು, ಪತ್ರ ಸಂಖ್ಯೆ:ಯುಡಿಡಿ/16/ ಟಿಟಿಪಿ/2023 (ಇ), ಬೆಂಗಳೂರು, ದಿನಾಂಕ:07-05-2025 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ. ಸದರಿ ಅಧಿಸೂಚನೆಯನ್ವಯ ಯೋಜನಾ ವ್ಯಾಪ್ತಿಯ ಹೊರಗಿರುವ ಗ್ರಾಮಗಳನ್ನು/ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. |
| (ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಯೋಜನಾ ವ್ಯಾಪ್ತಿಯ ಹೊರಗಿರುವ ಗ್ರಾಮಗಳಾವವು: ಇವುಗಳಿಗೆ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.<br><br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ಪ್ರಾಧಿಕಾರದ |

| | | |
|---|---|---|
| | ನಿಗಧಿಪಡಿಸಿದ ಪ್ರಾಧಿಕಾರಗಳಾವುವು: ಈ ಪ್ರಾಧಿಕಾರದ ಕಛೇರಿಗಳಿಗಾಗಿ ಸೃಜಿಸಲಾಗಿರುವ ಸಿಬ್ಬಂದಿ ಎಷ್ಟು: | ಕಛೇರಿಗಳಿಗಾಗಿ ಸೃಜಿಸಲಾಗಿರುವ ಸಿಬ್ಬಂದಿ ವಿವರವನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. |
| (ಇ) | ಮ್ಯಾಪಿಂಗ್ ಮಾಡಲಾದ ಗ್ರಾಮಗಳಿಗೆ ಅನುಗುಣವಾಗಿ ವಿನ್ಯಾಸ ನಕ್ಷೆ ಅನುಮೋದನೆಗೆ ಕುರಿತಂತೆ ಸಂಭವಿಸಬಹುದಾದ ಕಾರ್ಯದೊತ್ತಡವನ್ನು ಮಾಪನ ಮಾಡಿ ಅಧಿಕಾರಿ ಮತ್ತು ಸಿಬ್ಬಂದಿ ವೃಂದವನ್ನು ಸೃಜಿಸಲಾಗಿದೆಯೇ: | ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಯೋಜನಾ ಪ್ರಾಧಿಕಾರಗಳ ಕೆಲಸಗಳ ಒತ್ತಡ ಹಾಗೂ ಜನ ಸಂಖ್ಯೆಗೆ ಅನುಗುಣವಾಗಿ ಅಗತ್ಯವಿರುವ ಹುದ್ದೆಗಳನ್ನು ಸೃಜಿಸಲು ಅನುವಾಗುವಂತೆ ಹಾಗೂ ಆರ್ಥಿಕ ಇಲಾಖೆಯ ಸೂಚನೆಯಂತೆ Standard Staffing Pattern(ಪ್ರಮಾಣಿತ ಸಿಬ್ಬಂದಿ ಮಾದರಿ) ಯನ್ವಯ ಹುದ್ದೆಗಳನ್ನು ಗುರುತಿಸಲು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| (ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸ್ಥಳೀಯ ಯೋಜನಾ ಪ್ರಾಧಿಕಾರದ ಕಚೇರಿಗಳಲ್ಲಿ ಸಿಬ್ಬಂದಿಗಳ ಕೊರತೆಯಿಂದ ಅತಿಯಾದ ಕಾರ್ಯದೊತ್ತಡ ಉಂಟಾಗಿ ಸಾರ್ವಜನಿಕರ ಕೆಲಸಗಳಿಗೆ ಹಿನ್ನಡೆಯಾಗಿದ್ದು ಯಾವಾ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು: | ಕರಾವಳಿ ಭಾಗದ ಸಾರ್ವಜನಿಕರು ಜಿಲ್ಲಾ ಕೇಂದ್ರಕ್ಕೆ ಅಲೆಯುವ ಸಮಸ್ಯೆಗೆ, ತ್ವರಿತವಾಗಿ ಸೇವೆಯನ್ನು ಒದಗಿಸಲು ಸರ್ಕಾರದ ಆದೇಶ ಸಂಖ್ಯೆ:ನಅಇ 292 ಮೈಅಪ್ರಾ 2024, ದಿನಾಂಕ:07-08-2024 ರನ್ವಯ, ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡದೇ ಇರುವ ಗ್ರಾಮ ಪಂಚಾಯತಿಯಲ್ಲಿನ ಒಂದು (01) ಎಕರೆ ಒಳಗಿನ ಜಮೀನುಗಳಿಗೆ ಅನುಮೋದನೆ ನೀಡುವ ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ ನೀಡಲು ಸಹಾಯಕ ನಿರ್ದೇಶಕರ ಕಛೇರಿ ಹಾಗೂ ಹತ್ತಿರದ ಯೋಜನಾ ಪ್ರಾಧಿಕಾರಗಳ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ ಹಾಗೂ ತಾಲ್ಲೂಕು ಪಂಚಾಯತಿ ಕಛೇರಿಯಲ್ಲಿಯೇ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳು ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ. |
| (ಉ) | ಕಾರ್ಯ ದೊತ್ತಡ ನಿಭಾಯಿಸಲು ಹೊಸ ನೇಮಕಾತಿ ಆಗುವವರೆಗೆ ಬಾಹ್ಯ ಮಾನವ ಸಂಪನ್ಮೂಲ ಒದಗಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು? | |

ಸಂಖ್ಯೆ: ನಅಇ 538 ಮೈಅಪ್ರಾ 2025

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ

ಸಚಿವರು

## ಅನುಬಂಧ-1

## ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ವಿವರ ಹಾಗೂ ಇವುಗಳಿಗೆ ನಿಗಧಿಪಡಿಸಿದ ಪ್ರಾಧಿಕಾರಗಳ ವಿವರಗಳು ಈ ಕೆಳಕಂಡಂತಿವೆ

### ಉಡುಪಿ ಜಿಲ್ಲೆ

| ಕ್ರ. ಸಂ | ಕಛೇರಿಗಳ ಹೆಸರು | ಉಡುಪಿ ಜಿಲ್ಲೆಯ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ವಿವರ |
|---|---|---|
| 1. | ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ | ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಎಮ್‌ಎ 36(5) ಟಿಟಿಪಿ 76, ದಿನಾಂಕ:28.06.1976ರಲ್ಲಿ ಘೋಷಿಸಲಾಗಿದೆ.<br>ಉಡುಪಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.<br>ಉಡುಪಿ ಪಟ್ಟಣ (ಪುರಸಭೆಯ ಮಿತಿಯೊಳಗಿನ ಪ್ರದೇಶ), ಶಿವಳ್ಳಿ, ಹೆರ್ಗಾ, ೭೬ ಬಡಗಬೆಟ್ಟು, ಕೊಡವೂರು, ಪುತ್ತೂರು, ಅಂಬಲ್ಪಾಡಿ, ಮೂಡನಿಡಂಬೂರು, ಕಡೇಕಾರು, ಕದಿಯೂರು, ೮೦ ಬಡಗಬೆಟ್ಟು, ಅಲೆವೂರು, ಬಡನಿಡಿಯೂರು, ಕೊರಂಗ್ರಪಾಡಿ, ಕುತ್ಪಾಡಿ, ಕೆಳಾರ್ಕಳಬೆಟ್ಟ, ತೆಂಕನಿಡಿಯೂರು, ತೊನ್ಸೆ ಪೂರ್ವ, ತೊನ್ಸೆ ಪಶ್ಚಿಮ, ಉದ್ಯಾವರ. |
| 2. | ಕಾಪು ಯೋಜನಾ ಪ್ರಾಧಿಕಾರ | ಕಾಪು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಕರ್ನಾಟಕ ರಾಜ್ಯ ಪತ್ರ ಸಂಖ್ಯೆ:ನಅಇ 233 ಮೈಅಪ್ರಾ 2015, ದಿನಾಂಕ:30.03.2016ರಲ್ಲಿ ಘೋಷಿಸಲಾಗಿದೆ.<br>ಕಾಪು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.<br>ಕಾಪು ಪುರಸಭೆಯ ಪೂರ್ಣ ವ್ಯಾಪ್ತಿ, ಹುಳಿಯಾರಗೋಳಿ, ಪಡು, ಮಲ್ಲಾರ್, ಮೂಳೂರು, ಕೋಟ, ಮಟ್ಟು, ಪಾಂಗಳ, ಮಜೂರು, ಬಡಾ |
| 3. | ಕುಂದಾಪುರ ಯೋಜನಾ ಪ್ರಾಧಿಕಾರ | ಕುಂದಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 750 ಮೈಅಪ್ರಾ 2008, ದಿನಾಂಕ:20.12.2008ರಲ್ಲಿ ಘೋಷಿಸಲಾಗಿದೆ.<br>ಕುಂದಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.<br>ಕುಂದಾಪುರ ಕಸಬ ಗ್ರಾಮ, ವಡೇರ ಹೋಬಳಿ ಗ್ರಾಮ, ಹಂಗಳೂರು ಗ್ರಾಮ. |
| 4. | ಕಾರ್ಕಳ ಪುರಸಭೆ ಯೋಜನಾ ಪ್ರಾಧಿಕಾರ | ಕಾರ್ಕಳ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 109 ಮೈಅಪ್ರಾ 2013, ದಿನಾಂಕ:08.01.2018 ರಲ್ಲಿ ಘೋಷಿಸಲಾಗಿದೆ.<br>ಕಾರ್ಕಳ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಕಾರ್ಕಳ ಕಸಬಾ ಗ್ರಾಮ (ಪೂರ್ಣ ಗ್ರಾಮ) ಒಳಪಡುತ್ತದೆ. |
| 5. | ಸಾಲಿಗ್ರಾಮ ಪಟ್ಟಣ ಪಂಚಾಯಿತಿ ಯೋಜನಾ ಪ್ರಾಧಿಕಾರ | ಸಾಲಿಗ್ರಾಮ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 108 ಮೈಅಪ್ರಾ 2024(ಇ), ದಿನಾಂಕ:02.06.2025 ರಲ್ಲಿ ಘೋಷಿಸಲಾಗಿದೆ.<br>ಸಾಲಿಗ್ರಾಮ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.<br>ಚಿತ್ರಪಾಡಿ, ಕಾರ್ಕಡ, ಗುಂಡ್ಮಿ, ಪಾರಂಪಳ್ಳಿ. |

| | | |
|---|---|---|
| 6. | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ | ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ, ಕಾಪು ಯೋಜನಾ ಪ್ರಾಧಿಕಾರ, ಕುಂದಾಪುರ ಯೋಜನಾ ಪ್ರಾಧಿಕಾರ, ಕಾರ್ಕಳ ಪುರಸಭೆ ಯೊಜನಾ ಪ್ರಾಧಿಕಾರ ಹಾಗೂ ಸಾಲಿಗ್ರಾಮ ಪಟ್ಟಣ ಪಂಚಾಯಿತಿ ಯೋಜನಾ ಪ್ರಾಧಿಕಾರಗಳ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮಗಳನ್ನು ಹೊರತುಪಡಿಸಿ ಉಳಿದೆಲ್ಲಾ ಗ್ರಾಮಗಳು ಈ ಕಛೇರಿಯ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. |

## <u>ದಕ್ಷಿಣ ಕನ್ನಡ ಜಿಲ್ಲೆ</u>

| ಕ್ರ. ಸಂ | ಕಛೇರಿಗಳ ಹೆಸರು | ದಕ್ಷಿಣ ಕನ್ನಡ ಜಿಲ್ಲೆಯ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ವಿವರ |
|---|---|---|
| 1. | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಪಿ.ಎಲ್.ಎಂ.:126:ಎಂಎಸ್ಐ:65 ದಿನಾಂಕ:29.11.1965ರಲ್ಲಿ ಘೋಷಿಸಲಾಗಿದೆ.<br>ಮಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.<br>• **<u>ಮಹಾನಗರ ಪಾಲಿಕೆ-32 ಗ್ರಾಮಗಳು:</u>**ಜಪ್ಪಿನಮೊಗರು, ಮಂಗಳೂರು ತೋಟ, ಅತ್ತಾವರ, ಕಸ್ಬಾಬಜಾರ್, ಕಂಕನಾಡಿ, ಕಣ್ಣೂರು, ಅಳಪೆ, ಮರೋಳಿ, ಬಜಾಲ್, ಕದ್ರಿ, ಬೋಳೂರು, ದೇರೆಬೈಲ್, ಕೊಡಿಯಾಲ್ ಬೈಲ್, ಕುಂಜತ್ತಬೈಲ್, ಪಂಜಿಮೊಗರು, ಬಂಗ್ಲಕೂಳೂರು, ಪಡುಕೋಡಿ, ತಿರುವೈಲ್, ಕುಡುಪು, ಬೈಕಂಪಾಡಿ, ಸುರತ್ಕಲ್, ಕುಳಾಯಿ, ಕಾಟಿಪಳ್ಳ, ಇಡ್ಯಾ, ಹೊಸಬೆಟ್ಟು, ಪದವು, ಮರಕಡ, ಕಾವೂರು, ಪಚ್ಚನಾಡಿ, ತಣ್ಣೀರುಬಾವಿ, ಪಣಂಬೂರು, ಬೆಂಗ್ರೆ<br>• **<u>ಪಂಚಾಯತ್ ಗ್ರಾಮಗಳು:</u>** ಅಡ್ಯಾರ್, ನೀರುಮಾರ್ಗ (ಬೊಂಡಂತಿಲ-ನೀರುಮಾರ್ಗ), ಮೂಡುಶೆಡ್ಡೆ (ಮೂಡುಶೆಡ್ಡೆ ಪಡುಶೆಡ್ಡೆ), ಹಳೆಯಂಗಡಿ (ಪಾವಂಜೆ, ಹಳೆಯಂಗಡಿ), ಸಸಿಹಿತ್ಲು, ಪೆರ್ಮುದೆ, (ಪೆರ್ಮುದೆ, ಕುತ್ತೆತ್ತೂರು), ಕಿಲ್ಪಾಡಿ, ಪಡುಪಣಂಬೂರು (ಬೆಳ್ಳಾಯರು, ಪಡುಪಣಂಬೂರು), ಚೇಳ್ಯಾರು ಮದ್ಯ, ಬಾಳ (ಬಾಳ, ಕಳವಾರು), ಜೋಕಟ್ಟೆ (62 ನೇ ತೋಕೂರು), ಮುನ್ನೂರು, ಹರೇಕಳ, ಬೆಳ್ಮ, ಕೊಣಾಜೆ, ಅಂಗ್ಲಮೊಗರು, ಕಿನ್ಯಾ, ತಲಪಾಡಿ.<br>• **<u>ಮುಲ್ಕಿ ನಗರ ಪಂಚಾಯತ್ (ಒಟ್ಟು 4 ಗ್ರಾಮಗಳು):</u>** ಬಪ್ಪನಾಡು, ಕಾರ್ನಾಡು, ಚಿತ್ರಾಪು, ಮಾನಂಪಾಡಿ.<br>• **<u>ಉಳ್ಳಾಲ ನಗರಸಭೆ (ಒಟ್ಟು 2 ಗ್ರಾಮಗಳು):</u>** ಉಳ್ಳಾಲ, ಪೆರ್ಮನ್ನೂರು.<br>• **<u>ಪಟ್ಟಣ ಪಂಚಾಯತ್:</u>** ಕೋಟೆಕಾರು, ಬಜಪೆ (ಬಜಪೆ, ಕೆಂಜಾರು, ಮಳವೂರು).<br>• **<u>ಪುರ ಸಭೆ:</u>** ಸೋಮೇಶ್ವರ. |
| 2. | ಪುತ್ತೂರು ಯೋಜನಾ ಪ್ರಾಧಿಕಾರ | ಪುತ್ತೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 26 ಮೈಅಪ್ರಾ 2023(ಇ), ದಿನಾಂಕ:04.03.2023ರಲ್ಲಿ ಹಾಲಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಹೆಚ್ಚುವರಿಯಾಗಿ 4 ಗ್ರಾಮಗಳನ್ನು ಸೇರಿಸಿ ಒಟ್ಟು 12 ಗ್ರಾಮಗಳನ್ನು ಒಳಗೊಂಡಂತೆ ಹಾಲಿ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲಾಗಿದೆ.<br>ಪುತ್ತೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.<br>ಪುತ್ತೂರು ಕಸಬಾ (ಪೂರ್ಣ), ಪಡ್ನೂರು (ಭಾಗಶಃ), ಬನ್ನೂರು |

| | | |
|---|---|---|
| | | (ಭಾಗಶಃ), ಕಬಕ (ಭಾಗಶಃ), ಬಲ್ನಾಡು (ಭಾಗಶಃ), ಆರ್ಯಾಪು (ಭಾಗಶಃ), ಚಿಕ್ಕಮುಡ್ನೂರು (ಭಾಗಶಃ), ಕೆಮ್ಮಿಂಜೆ (ಭಾಗಶಃ), ವಿಟ್ಲ ಪಟ್ಟಣ ಪಂಚಾಯಿತಿ (ಪೂರ್ಣ), ವಿಟ್ಲಮುಡ್ನೂರು (ಭಾಗಶಃ), ಕುಳ (ಭಾಗಶಃ), ಇಡ್ಕಿದು (ಭಾಗಶಃ). |
| 3. | ಬಂಟ್ವಾಳ ಯೋಜನಾ ಪ್ರಾಧಿಕಾರ | ಬಂಟ್ವಾಳ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 65 ಮೈಅಪ್ರಾ 2010, ದಿನಾಂಕ:25.02.2010ರಲ್ಲಿ ಘೋಷಿಸಲಾಗಿರುತ್ತದೆ.<br>ಬಂಟ್ವಾಳ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.<br>ಬಂಟ್ವಾಳ ಕಸಬ (ಪೂರ್ಣ ಕಂದಾಯ ಗ್ರಾಮ), ಬಂಟ್ವಾಳ ಮೂಡ (ಪೂರ್ಣ ಕಂದಾಯ ಗ್ರಾಮ), ಪಾಣೆ ಮಂಗಳೂರು (ಪೂರ್ಣ ಕಂದಾಯ ಗ್ರಾಮ), ಅಮ್ಟಾಡಿ (ಸ.ನಂ.34, 35, 36, 41, 42, 51, 52, 54, 56, 57, 58, 126, 144, 147, 148, 149, 172, 175, 177, 182, 189, 198, 199, 200, 207, 215, 216, 220, 235, 241, 245), ನರಿಕೊಂಬು (ಸ.ನಂ.39, 40, 41, 43, 44, 45, 46, 47, 48, 49, 50, 51, 52, 53, 54, 55, 56, 60, 65, 66, 67, 68, 69, 70, 71, 72, 76, 77, 78, 79, 80, 81, 82, 83, 84, 85) |
| 4. | ಮೂಡಬಿದ್ರೆ ಯೋಜನಾ ಪ್ರಾದಿಕಾರ | ಮೂಡಬಿದ್ರೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 724 ಮೈಅಪ್ರಾ 2008, ದಿನಾಂಕ:03.01.2009 ರಲ್ಲಿ ಘೋಷಿಸಲಾಗಿದೆ.<br>ಮೂಡುಬಿದ್ರೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.<br>ಪ್ರಾಂತ್ಯ (ಪೂರ್ಣ ಕಂದಾಯ ಗ್ರಾಮ), ಮಾರ್ಪಾಡಿ(ಪೂರ್ಣ ಕಂದಾಯ ಗ್ರಾಮ), ಕಾರಿಂಜೆ (ಪೂರ್ಣ ಕಂದಾಯ ಗ್ರಾಮ), ಕಲ್ಲಬೆಟ್ಟು (ಪೂರ್ಣ ಕಂದಾಯ ಗ್ರಾಮ), ಮಾರೂರು (ಪೂರ್ಣ ಕಂದಾಯ ಗ್ರಾಮ), ಪಡುಮಾರ್ನಾಡು (ಭಾಗಶಃ) ಬೆಳವಾಯಿ (ಭಾಗಶಃ) ಪುತ್ತಿಗೆ (ಭಾಗಶಃ) ಹೊಸಬೆಟ್ಟು (ಭಾಗಶಃ) |
| 5. | ಸುಳ್ಯ ಯೋಜನಾ ಪ್ರಾಧಿಕಾರ | ಸುಳ್ಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 344 ಮೈಅಪ್ರಾ 2011, ದಿನಾಂಕ:03.09.2011 ರಲ್ಲಿ ಘೋಷಿಸಲಾಗಿದೆ.<br>ಸುಳ್ಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಗಳ ವಿವರಗಳು ಈ ಕೆಳಕಂಡಂತಿದೆ.<br>ಸುಳ್ಯ ಪಟ್ಟಣ ಪಂಚಾಯಿತಿ ಎಲ್ಲೆಯ ಕ್ಷೇತ್ರವನ್ನೆ ಸುಳ್ಯ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿದೆ. |
| 6. | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ ಮಂಗಳೂರು | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಪುತ್ತೂರು ಯೋಜನಾ ಪ್ರಾಧಿಕಾರ, ಬಂಟ್ವಾಳ ಯೋಜನಾ ಪ್ರಾಧಿಕಾರ, ಮೂಡಬಿದ್ರೆ ಯೋಜನಾ ಪ್ರಾದಿಕಾರ, ಸುಳ್ಯ ಯೋಜನಾ ಪ್ರಾಧಿಕಾರಗಳ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮಗಳನ್ನು ಹೊರತುಪಡಿಸಿ ಉಳಿದೆಲ್ಲಾ ಗ್ರಾಮಗಳು ಈ ಕಛೇರಿಯ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. |

ಅನುಬಂಧ-2

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ಪ್ರಾಧಿಕಾರದ ಕಛೇರಿಗಳಿಗಾಗಿ ಸೃಜಿಸಲಾಗಿರುವ ಸಿಬ್ಬಂದಿ ವಿವರಗಳು:

ದಕ್ಷಿಣ ಕನ್ನಡ ಜಿಲ್ಲೆ

| ಕ್ರ. ಸಂ | ಕಛೇರಿಯ ಹೆಸರು | ಮಂಜೂರಾಗಿರುವ ಹುದ್ದೆಗಳು | | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|---|
| | | ಪದನಾಮ | ಸಂಖ್ಯೆ | | | |
| 1 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | 01 | 01 | - | ಅಧೀಕ್ಷಕರು, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಚಿತ್ರದುರ್ಗ ಕಛೇರಿಯಲ್ಲಿ ಅನ್ಯ ಕರ್ತವ್ಯದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುತ್ತಾರೆ. ವಾಹನಚಾಲಕರ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ನಗರ ಯೋಜಕರು | 02 | 02 | - | |
| | | ಸಹಾಯಕ ನಗರ ಯೋಜಕರು | 03 | 02 | 01 | |
| | | ಅಧೀಕ್ಷಕರು | 01 | 01 | - | |
| | | ಪ್ರಥಮ ದರ್ಜೆ ಸಹಾಯಕರು | 01 | - | 01 | |
| | | ಬೆರಳಚ್ಚುಗಾರರು | 01 | - | 01 | |
| | | ಡಿ ಗ್ರೂಪ್ | 02 | - | 02 | |
| 2 | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು | ಆಯುಕ್ತರು | 01 | 01 | - | |
| | | ನಗರ ಯೋಜಕ ಸದಸ್ಯರು | 01 | 01 | - | |
| | | ವಿಶೇಷ ಭೂ ಸ್ವಾಧೀನಾಧಿಕಾರಿಗಳು | 01 | - | 01 | |
| | | ಸಹಾಯಕ ಕಾರ್ಯಪಾಲಕ ಅಭಿಯಂತರರು | 01 | 01 | - | |
| | | ಕಛೇರಿ ಕಾರ್ಯದರ್ಶಿ | 01 | 01 | - | |
| | | ನಗರ ಯೋಜಕರು | 01 | 01 | - | |
| | | ಸಹಾಯಕ ನಗರ ಯೋಜಕರು | 02 | - | 02 | |
| | | ಕಿರಿಯ ಇಂಜಿನಿಯರ್ | 02 | 02 | - | |
| | | ಲೆಕ್ಕಾಧೀಕ್ಷಕರು | 01 | - | 01 | |
| | | ಕಛೇರಿ ವ್ಯವಸ್ಥಾಪಕರು | 01 | 01 | - | |

| | | | | | | |
|---|---|---|---|---|---|---|
| | | ಪ್ರಥಮ ದರ್ಜೆ ಸಹಾಯಕರು | 01 | 01 | - | |
| | | ದ್ವಿತೀಯ ದರ್ಜೆ ಸಹಾಯಕರು | 02 | 02 | - | |
| | | ಮೋಜಣಿದಾರರು | 01 | 01 | - | |
| | | ಕಂದಾಯ ನಿರೀಕ್ಷಕರು | 01 | 01 | - | |
| | | ಶೀಘ್ರಲಿಪಿಗಾರರು | 01 | - | 01 | ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ಬೆರಳಚ್ಚುಗಾರರು | 01 | - | 01 | |
| | | ವರ್ಕ್ ಇನ್ಸ್‌ಪೆಕ್ಟರ್ | 01 | - | 01 | |
| | | ಕಂಪ್ಯೂಟರ್ ಆಪರೇಟರ್ | 01 | - | 01 | |
| | | ವಾಹನ ಚಾಲಕರು | 03 | 01 | 02 | |
| | | ಗ್ರೂಪ್ 'ಡಿ' | 03 | - | 03 | |
| | | ಲಿಫ್ಟ್ ಆಪರೇಟರ್ | 01 | - | 01 | |
| | | ರೇಖಕರು | 01 | - | 01 | |
| | | ಕಾವಲುಗಾರರು | 01 | - | 01 | |
| 3 | ಪುತ್ತೂರು ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯರ ಕಾರ್ಯದರ್ಶಿ ಹುದ್ದೆಗೆ ಮಂಗಳೂರು ಮಹಾನಗರ ಪಾಲಿಕೆಯ ಸಹಾಯಕ ನಿರ್ದೇಶಕರನ್ನು ಅಧಿಕ ಪ್ರಭಾರದಲ್ಲಿರಿಸಿದೆ ಹಾಗೂ ಸಹಾಯಕ ನಗರ ಯೋಜಕರು 01 ಹುದ್ದೆಯನ್ನು ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಕಛೇರಿಯಿಂದ ಅನ್ಯಕರ್ತವ್ಯದ ಮೇಲೆ ನಿಯೋಜಿಸಲಾಗಿದೆ.<br>ದ್ವಿತೀಯ ದರ್ಜೆ ಸಹಾಯಕರು, ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 4 | ಬಂಟ್ವಾಳ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | 01 | - | |
| | | ಸಹಾಯಕ ನಗರ ಯೋಜಕರು | 01 | - | 01 | 01 ಸಹಾಯಕ ನಗರ ಯೋಜಕರನ್ನು ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಇಂದ ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿದೆ. ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ |

| | | | | | | |
|---|---|---|---|---|---|---|
| | | | | | | ಆಧಾರದ ಮೇಲೆ ಪಡೆಯಲಾಗಿದೆ. |
| 5 | ಮೂಡಬಿದ್ರೆ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯ ಕಾರ್ಯದರ್ಶಿ ಹುದ್ದೆಗೆ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ಯೋಜಕರನ್ನು ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿದೆ.<br>ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 6 | ಸುಳ್ಯ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯ ಕಾರ್ಯದರ್ಶಿ ಹುದ್ದೆಗೆ ಸಹಾಯಕ ನಿರ್ದೇಶಕರು, ಮಂಗಳೂರು ಇವರನ್ನು ಅಧಿಕ ಪ್ರಭಾರದಲ್ಲಿರಿಸಲಾಗಿದೆ ಹಾಗೂ ನಗರ ಯೋಜಕರನ್ನು ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಇಂದ ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿದೆ. |

<u>ಉಡುಪಿ ಜಿಲ್ಲೆ</u>

| ಕ್ರ. ಸಂ | ಕಛೇರಿಯ ಹೆಸರು | ಮಂಜೂರಾಗಿರುವ ಹುದ್ದೆಗಳು | | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|---|
| | | ಪದನಾಮ | ಸಂಖ್ಯೆ | | | |
| 1 | ಕಾಪು ಯೋಜನಾ ಪ್ರಾಧಿಕಾ ರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯ ಕಾರ್ಯದರ್ಶಿ ಹುದ್ದೆಗೆ ಸಹಾಯಕ ನಿರ್ದೇಶಕರು, ಕೆ.ಎಸ್.ಟಿ.ಪಿ.ಬಿ ಇಂದ ಅನ್ಯ ಕರ್ತವ್ಯದ ಮೇಲೆ ಪ್ರಭಾರದಲ್ಲಿರಿಸಲಾಗಿದೆ. ನಗರ ಯೋಜಕರನ್ನು ಸರ್ಕಾರ ನೇಮಿಸಿದ್ದು ಹುದ್ದೆ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 2 | ಕುಂದಾಪುರ ಯೋಜನಾ ಪ್ರಾಧಿಕಾರ | ಸದಸ್ಯಕಾರ್ಯದರ್ಶಿ | 01 | 01 | - | ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ನಗರ ಯೋಜಕರು | 01 | 01 | - | |
| | | ಬೆರಳಚ್ಚುಗಾರರು | 01 | - | 01 | |
| | | ಡಿ ಗ್ರೂಪ್ | 01 | - | 01 | |
| 3 | ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ | ಆಯುಕ್ತರು | 01 | 01 | - | |
| | | ನಗರ ಯೋಜಕ ಸದಸ್ಯರು | 01 | 01 | - | |
| | | ಕಾರ್ಯಪಾಲಕ ಅಭಿಯಂತರರು | 01 | - | 01 | |
| | | ನಗರ ಯೋಜಕರು ಪರ್ಯಾವೇಕ್ಷಕರು | 01 | - | 01 | |
| | | ದ್ವಿತೀಯ ದರ್ಜೆ ಸಹಾಯಕರು | 01 | - | 01 | |
| | | ವಾಹನ ಚಾಲಕರು | 01 | - | 01 | |
| | | ಸೇವಕರು | 02 | 01 | 01 | |
| 4 | ನಗರ ಮತ್ತು ಗ್ರಾಮಾಂತರ | ಸಹಾಯಕ | 01 | 01 | - | |

| | | | | | | |
|---|---|---|---|---|---|---|
| | | ನಿರ್ದೇಶಕರು | | | | |
| | ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ. | ನಗರ ಯೋಜಕರು | 02 | 02 | - | 01 ನಗರ ಯೋಜಕರು ಇವರ ಸವೆಯನ್ನು ಅನ್ಯ ಕರ್ತವ್ಯದ ಮಲೆ ಸ.ನಿ ಕಾರವಾರ ಕಚೇರಿಗೆ ನೀಡಲಾಗಿದೆ.<br>01 ನಗರ ಯೋಜಕರು ಇವರು ಅನ್ಯ ಕರ್ತವ್ಯದ ಮೇಲೆ ವಾರದಲ್ಲಿ 01 ದಿನ ಕುಂದಾಪುರ ಯೋಜನಾ ಪ್ರಾಧಿಕಾರ. |
| | | ಸಹಾಯಕ ನಗರ ಯೋಜಕರು | 03 | 02 | 01 | 01 ಸಹಾಯಕ ನಗರ ಯೋಜಕರು ನಿಯೋಜನೆ ಮೇರೆಗೆ ತುಮಕೂರು ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.<br>01 ಸಹಾಯಕ ನಗರ ಯೋಜಕರು ನಿಯೋಜನೆ ಮೇರೆಗೆ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. |
| | | ಛಾಯಮುದ್ರಕರು | 01 | - | 01 | |
| | | ಪ್ರಥಮ ದರ್ಜೆ ಸಹಾಯಕರು | 01 | 01 | - | |
| | | ಬೆರಳಚ್ಚುಗಾರರು | 01 | - | 01 | ಹೊರಗುತ್ತಿಗೆ |
| | | ವಾಹನ ಚಾಲಕರು | 01 | 01 | - | |
| | | ಸೇವಕರು | 04 | 01 | 03 | |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.